ವಿಷಯ:- ಗುಲ್ಬರ್ಗಾ ವಿಶ್ವ ವಿದ್ಯಾಲಯದಲ್ಲಿ ವಿವಿಧ ಪರೀಕ್ಷೆಗಳ ಶುಲ್ಕವನ್ನು ಹೆಚ್ಚಿಸಿರುವುದು.

3(63)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ವಿವಿಧ ಪರೀಕ್ಷೆ ಹಾಗೂ ಪ್ರವೇಶ ಶುಲ್ಕವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಈ ಪ್ರಸ್ತಾಪಗಳು ಈಗ ಯಾವ ಹಂತದಲ್ಲಿದೆ;

ಇ) ಇದೇ ರೀತಿ ಶುಲ್ಕಗಳನ್ನು ಹೆಚ್ಚಿಸಲು ರಾಜ್ಯದ ಯಾವ ಯಾವ ವಿಶ್ವವಿದ್ಯಾಲಯಗಳು ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು):-

ಅ) ಹೌದು.

ಆ) ಶುಲ್ಕ ಹೆಚ್ಚಳದ ಆದೇಶವನ್ನು ಹಿಂತೆಗೆದುಕೊಳ್ಳಲಾಗಿದೆ. ವಿಚಾರವನ್ನು ಸಿಂಡಿಕೇಟ್ ಉಪ ಸಮಿತಿಗೆ ವಹಿಸಲಾಗಿದೆ.

ಇ) ಎಲ್ಲಾ ವಿಶ್ವವಿದ್ಯಾಲಯಗಳು (ಮುಕ್ತ ವಿಶ್ವವಿದ್ಯಾಲಯ ಮತ್ತು ಕನ್ನಡ ವಿಶ್ವ ವಿದ್ಯಾಲಯಗಳನ್ನು ಹೊರತುಪಡಿಸಿ).

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ತಮ್ಮ ಉತ್ತರದಲ್ಲಿ ಶುಲ್ಕ ಹೆಚ್ಚಳದ ಆದೇಶವನ್ನು ಹಿಂತೆಗೆದುಕೊಳ್ಳಲಾಗಿದೆ. ವಿಚಾರವನ್ನು ಸಿಂಡಿಕೇಟ್ ಉಪ ಸಮಿತಿಗೆ ವಹಿಸಲಾಗಿದೆ ಎಂದು ಹೇಳಿದ್ದೀರಿ. ಈಗಾಗಲೇ ಸಿಂಡಿಕೇಟ್ ಸಮಿತಿಯ ಒಂದು ಶಿಫಾರಸ್ಸಿನ ಮೇಲೆ ಶುಲ್ಕವನ್ನು ಹೆಚ್ಚಳ ಮಾಡಿದರು. ಮತ್ತೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಅದಕ್ಕೆ ಒಪ್ಪಿಸತಕ್ಕದ್ದರಲ್ಲಿ ಏನಾದರೂ ಅರ್ಥ ಇದೆಯೇ? ನಾನು ಶುಲ್ಕ ಹೆಚ್ಚಳ ಮಾಡಲೇಬಾರದು ಎಂದು ಹೇಳುವುದಿಲ್ಲ. ಆದರೆ ಎಷ್ಟು ಹೆಚ್ಚಳ ಮಾಡಿದ್ದಾರೆ ಎಂಬುದಕ್ಕೆ ಎರಡು ಉದಾಹರಣೆಗಳನ್ನು ಕೊಡುತ್ತೇನೆ. ಟ್ರಾನ್ಸ್‌ಕ್ರಿಪ್‌ಷನ್ ಮಾಡಲು 25 ರೂ ಇದ್ದದ್ದನ್ನು ಈಗ 250 ರೂ ಮಾಡಿದ್ದಾರೆ. ರೀವ್ಯಾಲ್ಯೂಯೇಷನ್ ಶುಲ್ಕ ರೂ. 750 ಇದ್ದದ್ದನ್ನು ಈಗ 1500 ರೂ ಮಾಡಿದ್ದಾರೆ. ಕಂಪ್ಲೀಷನ್ ಸರ್ಟಿಫಿಕೇಟ್ ಶುಲ್ಕ 25 ರೂಪಾಯಿ ಇದ್ದದ್ದನ್ನು 1000 ರೂಪಾಯಿ ಮಾಡಿದ್ದಾರೆ. ಅಂದರೆ ಒಂದೊಂದು ಶುಲ್ಕವನ್ನು ಸುಮಾರು ನೂರರಷ್ಟು ಹೆಚ್ಚಿಗೆ ಮಾಡಿದ್ದಾರೆ. ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಓದತಕ್ಕ ಪಿಜಿ ಮೆಡಿಕಲ್ ಕೋರ್ಸುನವರಿಗೆ ಮೊದಲು ಇದ್ದ ಶುಲ್ಕ 525 ರೂ. ಅದನ್ನು ಸಹ ಹೆಚ್ಚಳ ಮಾಡುವುದರಿಂದ ಕಾಲೇಜುಗಳಲ್ಲಿ ಓದತಕ್ಕ ಸಾಮಾನ್ಯ ಹುಡುಗರಿಗೆ ಬಹಳ ತೊಂದರೆಯಾಗುತ್ತಿದೆ. ನಾನು ಖಾಸಗಿ ಕಾಲೇಜುಗಳ ಬಗ್ಗೆ ಹೇಳುತ್ತಿಲ್ಲ; ಸರ್ಕಾರಿ ಕಾಲೇಜುಗಳ ಬಗ್ಗೆ ಹೇಳುತ್ತಿದ್ದೇನೆ. ಅಲ್ಲಿ ಏನು ಶುಲ್ಕ ಹೆಚ್ಚಳ ಮಾಡಿದ್ದೀರಿ ಅದು ಸರಿಯಲ್ಲ. ಸಿಂಡಿಕೇಟ್‌ಗೆ ಒಪ್ಪಿಸುವುದರಲ್ಲಿ ಅರ್ಥವಿಲ್ಲ. ಸಿಂಡಿಕೇಟ್ ಶಿಫಾರಸ್ಸಿನ ಮೇಲೆ ಹಿಂದೆ ಶುಲ್ಕವನ್ನು ಹೆಚ್ಚಿಗೆ ಮಾಡಿದ್ದೀರಿ ಪುನಃ ಅದಕ್ಕೆ ಏತಕ್ಕೆ ಒಪ್ಪಿಸಬೇಕು?

ಶ್ರೀ ಬಿ. ಸೋಮಶೇಖರ್:- ಈ ಪ್ರವೇಶ ಶುಲ್ಕ ಬೇರೆ ಬೇರೆ ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ 10- 15 ವರ್ಷಗಳ ಹಿಂದೆ ನಿಗದಿ ಮಾಡಿರತಕ್ಕದ್ದು. ಈಗ ತಮಗೆ ಗೊತ್ತಿರುವ ಹಾಗೆ ಎಲ್ಲಾ ಸಂಬಳ ಸಾರಿಗೆಗಳು, ಪ್ರಯೋಗ ಶಾಲೆಗಳ ಪದಾರ್ಥಗಳು, ಇವೆಲ್ಲವುಗಳ ಬೆಲೆಗಳು ಹೆಚ್ಚಾಗಿವೆ. ವಿಶ್ವವಿದ್ಯಾಲಯಗಳು ತಮ್ಮ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು; ತಾವೇ ತಮ್ಮ ತಮ್ಮ ರಿಸೋರ್ಸ್‌ಸ್ ಮೊಬೆಲೈಸ್ ಮಾಡಿಕೊಳ್ಳಬೇಕೆಂಬುದು ಇದೆ. ಯು.ಜಿ.ಸಿ. ಯಿಂದ ಮತ್ತು ಸರ್ಕಾರದಿಂದ ಉನ್ನತ ಶಿಕ್ಷಣಕ್ಕೆ ಹೆಚ್ಚು ಹಣ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ ಆದ್ದರಿಂದ ಶುಲ್ಕ ಹೆಚ್ಚಳ ಮಾಡದೇ ಬೇರೆ ದಾರಿಯಿಲ್ಲ. ಈ ಶುಲ್ಕ ಹೆಚ್ಚಿಗೆ ಮಾಡಬೇಕೆಂಬುದು ಯುಜಿಸಿಯ ನಿರ್ದೇಶನ ಕೂಡ ಇದೆ. ಈ ಬಗ್ಗೆ ಎಲ್ಲಾ ರಾಜ್ಯಗಳ ಒಂದು ಸಭೆ ಕೂಡ ನಿನ್ನೆ ಜರುಗಿತು.

ಅಧ್ಯಕ್ಷರು:- ಇಲ್ಲಿ ಪ್ರಶ್ನೆ ಬಹಳ ಸರಳವಾಗಿದೆ. ಅವರು ವಿಸ್ತರಿಸಿದರು, ತಾವು ವಿಸ್ತರಿಸುತ್ತಿದ್ದೀರಿ. ಈಗ ನೀವು ಏನು ಶುಲ್ಕ ಹೆಚ್ಚಳ ಮಾಡಿದ್ದೀರಿ ಅದನ್ನು ಹಿಂದೆ ಸಿಂಡಿಕೇಟ್ ಉಪ ಸಮಿತಿಗೆ ಒಪ್ಪಿಸಿದ್ದೆ ಎಂದು ತಾವು ಹೇಳಿದಿರಿ. ಅವರು ಹೇಳಿದ್ದುದು ಸಿಂಡಿಕೇಟ್ ಮೊದಲು ನಿರ್ಣಯ ಮಾಡಿದ್ದರ ಮೇಲೆ ಹೆಚ್ಚಳ ಮಾಡಿದ್ದೀರಿ. ಮತ್ತೆ ಅವರಿಗೆ ಒಪ್ಪಿಸುವುದರಲ್ಲಿ ಅರ್ಥ ಏನು ಇದೆ? ಶುಲ್ಕ ಹೆಚ್ಚಿಗೆ ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಒಂದೇ ಸಮನೆ ಭಾರ ಹೆಚ್ಚಿಗೆ ಮಾಡಿದ್ದಾರೆ ಎಂಬುದು ಅವರ ಪ್ರಶ್ನೆ. ಅದಕ್ಕೆ ಉತ್ತರಿಸುತ್ತೀರೋ?

ಶ್ರೀ ಬಿ. ಸೋಮಶೇಖರ್:- ಹೆಚ್ಚು ಮಾಡಿದ ಬಗ್ಗೆ ವಿದ್ಯಾರ್ಥಿಗಳು ಸ್ವಲ್ಪ ಪ್ರತಿಭಟನೆ ಮಾಡಿದ ಮೇಲೆ, ಹೆಚ್ಚಳ ಆಯಿತು ಎಂಬುದು ವಿಶ್ವವಿದ್ಯಾನಿಲಯದ ಗಮನಕ್ಕೆ ಬಂದ ಮೇಲೆ ಸ್ವಲ್ಪ ಯೋಚನೆ ಮಾಡಿ ಕಡಿಮೆ ಮಾಡುವ ದೃಷ್ಟಿಯಿಂದ ಸಬ್‌ಕಮಿಟಿಗೆ ರೆಫರ್ ಮಾಡಿದ್ದಾರೆ. ಸಬ್-ಕಮಿಟಿಯವರು ಅದನ್ನು ಪರಿಶೀಲಿಸಿ ವರದಿ ಕೊಟ್ಟಮೇಲೆ ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಹೆಚ್ಚಳ ಮಾಡಲೇಬಾರದು ಎಂಬುದು ನಮ್ಮ ಪ್ರಶ್ನೆಯಲ್ಲ. ಆದರೆ ಹೆಚ್ಚಳ ಮಾಡಿದಂಥ ಪ್ರಮಾಣ ಇದೆಯಲ್ಲಾ ಅದು 100-200 ಪಾಲು ಹೆಚ್ಚು ಮಾಡಿದ್ದೀರಿ ಎಂಬುದಷ್ಟೇ ನಮ್ಮ ಆಕ್ಷೇಪ. 20 ವರ್ಷಗಳಿಂದ ಎಷ್ಟಿದೆಯೋ ಅಷ್ಟೇ ಇರಬೇಕು ಎಂದು ನಾನು ಖಂಡಿತ ಹೇಳುತ್ತಿಲ್ಲ. ಆದರೆ 25 ರೂಪಾಯಿ ಇದ್ದುದ್ದನ್ನು ಏಕ್‌ದಮ್ 1000 ರೂಪಾಯಿ ಮಾಡುವುದು, 250 ರೂಪಾಯಿ ಇದ್ದುದ್ದನ್ನು 1500 ರೂಪಾಯಿ ಮಾಡುವುದರಿಂದ ಬಡ ವಿದ್ಯಾರ್ಥಿಗಳಿಗೆ ಭಾರಿ ತೊಂದರೆಯಾಗುತ್ತದೆ ಎಂಬುದು ನಮ್ಮ ಪ್ರಶ್ನೆ. ಮತ್ತೆ ಅದನ್ನು ಈಗ ಸಿಂಡಿಕೇಟ್ ಉಪ ಸಮಿತಿಗೆ ಕಳುಹಿಸಿರುವುದರಲ್ಲಿ ಅರ್ಥವಿಲ್ಲ. ಅವರು ರೆಕಮೆಂಡ್ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರವೇ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ವಿದ್ಯಾರ್ಥಿಗಳು ಪ್ರತಿಭಟನೆ ಮಾಡುತ್ತಾರೆ; ಆಗ ಹೆಚ್ಚು ಸಮಸ್ಯೆ ಆಗುತ್ತದೆ.

ಶ್ರೀ ಬಿ. ಸೋಮಶೇಖರ್:- ಎರಡನೇ ಸಾರಿ ನೋಡಿ, ಸ್ವಲ್ಪ ಕಡಿಮೆ ಮಾಡಿ ಎಂದು ಶಿಫಾರಸ್ಸು ಮಾಡಿ ಎಂದು ಅವರು ಸೂಚನೆ ಕೊಟ್ಟಿರುವುದರಿಂದ ಬಹುಶಃ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.